Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿಂಪ್ಲೇಡಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 185] ಮಂಗಳವಾರ 17—4—45 [3 ಪೈ

ಹೊಸಹೊಸ ಸುದ್ದಿ

ಸ್ಯಾನಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ಹೋದ ಪ್ರತಿನಿಧಿಯಾಗಿ ಮಿ || ಮೂಲ ಶಾನಂಸ್ಕ್ ಸ್ಟಾಲಿನ್ನಂಗಳುಹಿಸಿದನು. ಬೋರ್ಡೋವಿಗಾಗಿ ಕದನ ಪ್ರಾರಂಭವಾಗಿದೆ. ಫ್ರೆಂಚ್ ತೀರವಲ್ಲಿ ನಾಜೀ ನಿರ್ನಾಮಕ್ಕೆ ಪ್ರಾರಂಭವಾಗಿದೆ.

ಫ್ರಾಂಕ್‌ಫರ್ಟ್-ಕುಫ್ಹಾಸಿಟ್ಸನ್ ಭಾಗದಲ್ಲಿ ರಷ್ಯನ್ನರು ಆಕ್ರಮಣ ಪ್ರಾರಂಭಿಸಿದರು.

ಗೋರಿಂಗಿನ ಸುಳುವೇ ಈಗ ಇರುವುದಿಲ್ಲ. ಆತನು ಜರ್ಮನಿ ಗಡಿಯಲ್ಲಿ ಖಾಣಿ ಮಾಡಲ್ಪಟ್ಟಿರುವನು ಅಥವಾ ತಾನೇ ತನ್ನ ಪ್ರಾಣವನ್ನು ನಿಸ್ಪವಾಡಿಕೊಂಡಿರುವನು ಎಂದು ಹೇಳಲಾಗಿದೆ.

ಓಕಿನಾವಾದ ವಾಯುವ್ಯದಲ್ಲಿರುವ ಕೈಯಿಪ್ ದ್ವೀಪವನ್ನು ಏತ್ರಿಂ ಆಕ್ರಮಿಸಿಕೊಳ್ಳಲು ಪ್ರಾರಂಭಿಸಿದರು.

ಶ್ರೀ ಕೆ. ಎಂ. ಮುನ್ಷಿಯವರು ಹಿಂದೂ ಮತವು ನಾಗರೀಕ ಸ್ವಸಂಚದಲ್ಲಿ ಉಳಿಯಬೇಕಾದರೆ ಹಿಂದೂಗಳು ಏಕ ಪತ್ನಿ ಸ್ವತಂತ್ರಾಗಿರಬೇಕೆಂದು ಮದರಾಸಿನಲ್ಲಿ ಹಿಂದೂ ಸುತ ಸುಧಾರಣೆ ವಿಷಯದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿರುತ್ತಾರೆ.

ಭಾರತದಿಂದ ಅಮೇರಿಕಾಕ್ಕೆ ಮೂರುಕೋಟಿ ಮರಳು ಚೀಲಗಳನ್ನು ಭಾರತ ಸರ್ಕಾರವು ಕೊಡಲೊಪ್ಪಿರುವುದೆಂದು ಅಮೇರಿಕಾ ಯುದ್ಧ ಸಾಮಗ್ರಿ ಬೋರ್ಡಿನವರು ಪ್ರಕಟಿಸಿರುವರು.

ಬಂಗಾಳದ ದೊಡ್ಡದಾದ ಮತ್ತು ಪ್ರಮುಖವಾದ ವ್ಯಾಪಾರ ಕೇಂದ್ರವಾದ ಚಾಮುಹಾನಿಯಲ್ಲಿ ಭಾರಿ ಅಗ್ನಿಯುಂಟಾಗಿ 20–25 ಲಕ್ಷ ರೂಪಾಯಿಗಳ ನಷ್ಟವುಂಟಾಗಿದೆ. ಸುಮಾರು ೫ನ್ನೂರು ಮಂದಿ ತಮ್ಮ ವ್ಯಾಪಾರ ಸಂಕನ್ನು ಕಳೆದುಕೊಂಡಿರುತ್ತಾರೆ.

ಬೆಂಗಳೂರಿನಲ್ಲಿ ಒಬ್ಬ ಸೈಕಲ್ ಅಂಗಡಿಯವನು ರೂ. 150 ಬೆಲೆಯ ರ್ಯಾಲೆ ಬೈಸಿಕಲ್ಲನ್ನು ರೂ. 300 ಬೆಲೆಗೆ ಮಾರಿದ್ದಕ್ಕೆ ಶ್ರೀ ಹನುಮಂತ ಶೆಟ್ಟಿ ಎಂಬ ಆತನಿಗೆ 6 ತಿಂಗಳ ಸಜೆ ಮತ್ತು 1000 ರೂ, ಜುಲ್ಮಾನೆ ವಿಧಿಸಿದರು. ಅಲ್ಲದೆ ಈ ಅಪರಾಧಿಯು ಹೆಚ್ಚುವರಿದ 300 ರೂಪಾಯಿಗಳ ಸೈಕಿ ರೂ. 150 ಸರಕಾರಕ್ಕೂ, ಬಾಕಿ 150 ರೂ. ಗಳನ್ನು ಬೈಸಿಕಲ್ ಕೊಂಡುಕೊಂಡ ಶ್ರೀ ಬಸಪ್ಪನೆಂಬವರಿಗೂ ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞಾಪಿಸಿರುವರು

ಚಾಮರಾಜನಗರದ ದೊಂಬಿ ಮೊಕದ್ದಮೆಗೆ ಸಂಬಂಧವಾದವಿವಾದಗಳು ಬೆಂಗಳೂರು ಹೈಕೋರ್ಟಿನಲ್ಲಿ ಪ್ರಾರಂಭವಾಗಿದ್ದು ತೀರ್ಪಿಗೆ ಕಾಯಿಡಲಾಗಿದೆ.



ಫ್ಲೈಯಿಂಗ್ ಫಾರ್ಟ್ರೆಸ್ ಬಾಂಬರುಗಳು ಜರ್ಮನಿಯ ನರ್ಬರ್ಗ್ ಮೇಲೆ ಧಾಳಿ ಮಾಡುತ್ತಿರುವ ದೃಶ್ಯ

ವಾರ್ತಾತರಂಗ

ಭಾರತದಲ್ಲಿ ಸರ್ವರೂ ಮಹಾತ್ಮಾ ಗಾಂಧಿ ಮತ್ತು ಪಂಡಿತ ಜವಹರಲಾಲರ ಮೇಲ್ಪಂಗ್ತಿಯನ್ನು ಅನುಸರಿಸಿದಲ್ಲಿ ದೇಶವು ಹೇಗೆ ಉದ್ಧಾರವಾಗುವುದು ಎಂದು ಅದವಾನಿ ಸಬ್ ಕಲೆಕ್ಟರ್ ರೂ. ಪೌರಸಭಾಧ್ಯಕ್ಷರೂ ಸದಸ್ಯರ ಮುಂದೆ ಮಾಡಿದ ಭಾಷಣದಲ್ಲಿ ಹೇಳಿದರು.

ಹಿಟ್ಲರನು ಈಗ ಅಧಿಕಾರದಲ್ಲಿಲ್ಲವೆಂದೂ, ಹಿಮ್ಲರನೇ ಎಲ್ಲಾ ಕಾರ್ಯಭಾಗವನ್ನೂ ನಡೆಸುತ್ತಿರುವನೆಂದೂ ವಾರ್ತೆ ಹರಡಿದೆ

ಜಪಾನ್ ಚಕ್ರವರ್ತಿಯ ಅರಮನೆಯೂ ಮತ್ತು ಮೆಯಿಜಿ ದೇವಾಲಯವೂ ಅಮೇರಿಕ ವಿಮಾನಗಳಿಂದ ಸುಟ್ಟುಹೋದವು.

ಹೊಸ ಜರ್ಮನ್ ಜೆಟ್ ಕ್ಯಾಪ್ಟರ್ ಕ್ಲಾಸ್ ಈಗ ನೇಪ್ಲಿನ ಒಂದು ಹುಚ್ಚಾಸ್ಪತ್ರೆಯಲ್ಲಿ ಬಿದ್ದಿರುವನು.

ವಂದರಾಸು ರೈಲ್ವೆ ಮತ್ತು ಸೌತ್ ಇಂಡಿಯನ್ ರೈಲ್ವೆ ಎರಡೂ ಒಂದಾಗಿ ಸರ್ಕಾರದ ಆಡಳಿತಕ್ಕೆ ಬರುವುದೆಂದು ಗೊತ್ತಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳ ಸಂಬಂಧವಾಗಿ ತುಮಕೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಇದೇ ತಾ || 19 ರಲ್ಲಿ ಮೈಸೂರು ಅ || ಇಂಜಿನಿಯರ್ ಶ್ರೀ ಪೆಚ್. ಕಪನೀಪತಿಭಟ್ಟರು ' ಪಟ್ಟಣಗಳಲ್ಲಿ ನೀರಿನ ಸರಬರಾಯಿ ' ವಿಷಯದಲ್ಲಿ ಭಾಷಣ ಮಾಡುವರು.

ವಿವಿಧ ವರ್ತಮಾನ

ಜರ್ಮನಿಯು ರೈನ್ ನದಿಗೆ ಕಟ್ಟಿರುವ ಸೇತುವೆಗೆ ಮಿತ್ರರು ರೂಸ್ವಲ್ಟ್-ಸೇತುವೆ ಎಂದು ನಾಮಕರಣ ಮಾಡಿರುವರು.

ಮಹಾತ್ಮಾ ಗಾಂಧಿಯವರು ಜೈಲಿಗೆಯನ್ನು ಮಹಾಬಲೇಶ್ವರದಲ್ಲಿ ಳೆಯಲಿರುವರೆಸಿದೂ, ಇದೇ ತಿಂಗಳು 20 ಕ್ಕೆ ಅವರು ಅಲ್ಲಿಗೆ ಹೋಗುವರೆಂದೂ ತಿಳಿದುಬರುತ್ತದೆ.

ನ್ಯೂಯಾರ್ಕಿನಲ್ಲಿ ಕುದುರೆ ಜೂಜು ಇಲ್ಲದೆ ಜನರಲ್ಲಿ ಹತಾಶಕಾರ ಹುಟ್ಟಿದೆ. ವಿಜಯದ ದಿವಸವನ್ನು ಕಾಯುತ್ತಿರುವರು. ರೇಸ್ ಪ್ರಾರಂಭಿಸಲು ಅಲ್ಲಿನ ಇಂಕಂಟ್ಯಾಕ್ಸ್ ಅಧಿಕಾರಿಗಳು ಇನ್ನೇನು ವಿಜಯದ ದಿವಸ ಸನ್ನಿಹಿತವಾಯಿತು. ರೇಸೆಸ್ ಪ್ರಾರಂಭವಾಗುವುದೆಂದು ತಮ್ಮ ಪೆನ್ಸಿಲ್ಲುಗಳನ್ನು ಒದಿ ಸಿದ್ಧ ಮಾಡಿಕೊಳ್ಳುತ್ತಿರುವರೆ.

ಬಳಿಗಾಳಿನ ಮಿಡ್ನಾಪುರಕ್ಕೆ ಮೌಲಾನಾ ಅಬ್ದುಲ್ ಕಲಾಂ ಆಜಾದರನ್ನು ಆಜಾದರನ್ನು ತಂಡಿರುವಂತಿದೆ. ಇದಕ್ಕಾಗಿ ಒಂದು ಬಂಗ್ಲೆ ಮುಂಸ್ತಾಗುತ್ತಿದೆ.

ಈ ತಿಂಗಳು 20 ರಲ್ಲಿ ಹಿಟ್ಲರಿನ ವರ್ಧಂತಿಯನ್ನು ಜರ್ಮನಿಯಲ್ಲಿ ನಡೆಸುವುದಿಲ್ಲವೆಂದು ತೀರ್ಮಾನವಾಗಿದೆ. ಆವನೆನ್ನು ಸಹ್ಯ ಎಷ್ಟು ತಿಂಗರಾಯಿತೆಂದು ಬೊಂಬಾಯಿನ ಪತ್ರಿಕೆಯೊಂದು ಬರೆದಿದೆ !

ಮನುಷ್ಯನ ತಿನ್ನುವ ಜೋಳವಿಲ್ಲವೆಂದು ಅನಂತಪುರದ ಹೋಟಲುಗಳೆಲ್ಲಾ ಒಂದಾಗಿವೆ.

ಟರ್ಕಿಯ ಮಾಜಿ ಜರ್ಮನ್ ರಾಯಭಾರಿಯಾದ ವಾನ್ ಪೇಪನ್‌ರವರನ್ನು ಹಿಡಿದು ಸೆರೆಯಾಗಿಸಿದರೆಂದು ತಿಳಿಯು ಬರುತ್ತದೆ. ಇವರಲ್ಲದೆ ಇನ್ನೂ ಮುಗ್ಗನಾ ಅಳಿಯನ್ನೂ ಸಿಕ್ಕಿಬಿದ್ದಿಹುದರು.

ಗಾನವಿಶಾರದ ಬಿಡಾಪಡಿ ಕೃಷ್ಣಪ್ಪನವರ
ಪ್ರಸನ್ನ ಸೀತಾಂಬಮ್ಮ ಮಂದಿರದಲ್ಲಿ
— ರಾಮೋತ್ಸವ ಪ್ರಯುಕ್ತ —

ಈ ತಿಂಗಳು 20 ನೆ ತಾರೀಖಿನಿಂದ ಮೇ 1 ನೇ ತಾರೀಖಿನವರೆಗೆ ಈ ಕೆಳಗೆ ಕಂಡ ಸಂಗೀತ ವಿದ್ವಾಂಸರಿಂದ ಸಂಗೀತಗಳಾಗುವುವು. ಮಹಾಜನರು ದಯಪೂರ್ವಕವಿಸಿಪ್ರೋತ್ಸಾಹಿಸಬೇಕಂ.

ಏಪ್ರಿಲ್ ತಾ॥ 20 ಶ್ರೀ ಮುಸಾರಿ ಸುಬ್ರಹ್ಮಣ್ಯಐಯ್ಯರವರ ಹಾಡುಗಾರಿಕೆ, ತಾ ॥ 21 ಶ್ರೀ ಮೈಸೂರು ಪುಟ್ಟಸ್ವಾಮಯ್ಯನವರ ಹಾಡುಗಾರಿಕೆ, ತಾ ॥ 22 ಶ್ರೀಮತಿ ವಸಂತ ಕುಮಾರಿ ಮತ್ತು ಪಾರ್ಟಿಯವರ ಸಂಗೀತ, ತಾ ॥ 23 ಮೈಸೂರು ಶ ॥ ವಿದ್ವಾಕ್ ದೊರಸ್ವಾಮಿಯವರ ವೀಣೆ, ತಾ ॥ 24 ಶ್ರೀಮತಿ ಸುಬ್ಬಲಕ್ಷ್ಮಿ ಮತ್ತು ಪಾರ್ಟಿಯವರ ಸಂಗೀತ. ತಾ ॥ 25 ತಿರುವಾಂಕೂರು ಆಸ್ಥಾನ ವಿದ್ವಾಕ್ ಬಿ. ಎನ್. ಬಾಲಸುಬ್ರಹ್ಮಣಂ ಬಿ. ಏ. (ಆನರ್ಸ್) ರವರ ಹಾಡುಗಾರಿಕೆ. ತಾ॥ 26 ತಿರುವಾಂಕೂರು ಆಸ್ಥಾನ ವಿದ್ವಾನ್ ಕಲ್ಯಾಣ ಕೃಷ್ಣ ಭಾಗವತರ ಹಾಡುಗಾರಿಕೆ ತಾ ॥ 27 ಬೊಂಬಾಯಿನ ಶ್ರೀ ಅಲಮೇಲು ಮಂಗುಮ್ಮಾಳರ ಹಾಡುಗಾರಿಕೆ. ತಾ ॥ 28 ಶ್ರೀ ಗಾನಗಂಧರ್ವ ಚಂಬ್ಮಾ ನೈದ್ಯನಾಥ ಭಾಗವತರ ಹಾಡುಗಾರಿಕೆ. ತಾ ॥ 29 ಶ್ರೀರಾಮನು ಪಟ್ಟಾಭಿಷೇಕಂ, ವಿದ್ವಾಕ್ ಅಣ್ಣಾಸ್ವಾಮಿ ಮತ್ತು ಪಾರ್ಟಿಯವರ ಹರಿಕಥಾ ಕಾಲಕ್ಷೇಪ. ತಾ ॥ 30 ಹನುಮಂತೋತ್ಸವ. ನಾಗಸ್ವರ. (ರಾತ್ರೆ 9 ಗಂಟೆಗೆ ಉತ್ಸವ). ಮೇ ತಾ ॥ 1 ಶಯನೋತ್ಸವ.

ಸೆಂಬರಲ್ಲದವರಿಗೆ ಟಿಕೀಟು ದರ— ಗಂಡಸರಿಗೆ ರೂ. 2, ಹೆಂಗಸರಿಗೆ ರೂ. 1-8-0 : ಮಕ್ಕಳಿಗೆ ರೂ. 1. ಸೀಜ್ ಟಿಕೀಟು ಗಂಡಸರಿಗೆ ರೂ. 10 ; ಹೆಂಗಸಂಗೆ ರೂ 8 ; ಮಕ್ಕಳಿಗೆ ರೂ. 5.

ಶ್ರೀ ರಾಮೋತ್ಸವ

ರಾಜಧಾನಿಯು ಕೃಷ್ಣಮೂರ್ತಿಪುರಂ ನಲ್ಲಿರುವ ಶ್ರೀ ಸರ್ವ ನಾರಾಯಣಾಲಯ ಕ್ಕೆ ನಾಡಿದ್ದರು ಇದೇ ಏಪ್ರಿಲ್ 13 ರಿಂದ 21 ರವರೆಗೆ ಶ್ರೀ ರಾಮನವಮಿ ಮಹೋತ್ಸವವನ್ನೂ 21 ರಲ್ಲಿ ಪಟ್ಟಾಭಿಷೇಕವನ್ನೂ ಮಾಮೂಲು ಮೇರೆ ನಡೆಸಲಿರುವರೆಂದೂ ಭಕ್ತಾದಿಗಳು ಸಹಾಯಮಾಡಿ ಶ್ರೀ ರಾಮನ ಕೃಪೆಗೆ ಪಾತ್ರರಾಗಬೇಕೆಂದೂ ಭಕ್ತ ಮಂಡಲಿಯ ಪರವಾಗಿ ಶ್ರೀ ಆರ್. ಹೆಚ್. ಅರುಣಾಚಲಂರವರು ಕೋರಿರುತ್ತಾರೆ.

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ನ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು- ಮತ್ತು —

ವಲ್ಲಭದಾಸ್ ತೇಜ್ ಪಾಲ್. ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು
14. ಗೋವಿಂದಪ್ಪ ನಾಯಿಕ ಬೀದಿ ಜಿ.ಟಿ. ಮದರಾಸ್.

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ
ಸೇವನೆಯೇ ಸುಲಭೋಪಾಯ
ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಅಂದವಾದ ಹೊಲಿಗೆಗೆ
— ಸಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ ಮೈಸೂರು

TALK-A-TONE
(Pioneer Film-mag of S. India)
Local Agent—D. Mahadev
Opera Talkies, Mysore

AT OPERA — From 12-4-45
POOMPAVAI
'ಪೂಂಪಾವೈ'
ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣಕ್

At Ranjit
Pagli Duniya
ರಣಜಿತ್ ಟಾಕೀಸಿನಲ್ಲಿ
5 ನೇ ಅಮೋಘ ವಾರ
ಪಗಲಿ ದುನಿಯಾ
(ಹಿಂದಿ)
ನುಮ್ಮಾಜ್ ಶಾಂತಿ ಮೋತಿಲಾಲ್
ಜೇಕ್‌ಮುಕ್ತಾರ್ ಪಾತ್ರವಹಿಸಿರುವರು

ಐ.ಜೆ. ಹಾಲ್, ಸರಾಫ್ ಅಂಗಡಿ
ರನೇ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—
L. N. Press
Sriramp et MYSORE